ಕರ್ನಾಟಕ ಸರ್ಕಾರ
ಕೃಷಿ ಇಲಾಖೆ

ಸಂ:ರೈಸಂಕೇ/ತಾ-1/KSSC/ಹೊರಗುತ್ತಿಗೆ ಸಿಬ್ಬಂದಿ/13/14-15

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕ:11.06.2014.

## ಸುತ್ತೋಲೆ

ವಿಷಯ: ಹೊರಗುತ್ತಿಗೆ ಆಧಾರದ ಮೇರೆಗೆ ರೈತ ಸಂಪರ್ಕ ಕೇಂದ್ರಗಳಿಗೆ ಸಿಬ್ಬಂದಿಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ:1. ಕ.ರಾ.ಬೀ.ನಿ. ಇವರ ಪತ್ರದ ಸಂಖ್ಯೆ:KSSC/ADM/1313/2014-15, ದಿನಾಂಕ:09.06.2014.

2. ಮೆ//ಸ್ಮಾರ್ಟ್ ಡಿಟೆಕ್ಟಿವ್ಸ ಮತ್ತು ಅಲೈಡ್ ಸರ್ವಿಸಸ್ (ಇಂಡಿಯಾ) ಪ್ರೈ.ಲಿ ಇವರ ಪತ್ರದ ದಿನಾಂಕ:09.06.2014.

********

ರಾಜ್ಯದ ಪ್ರತಿ ಹೋಬಳಿಗೆ ಒಂದರಂತೆ ಒಟ್ಟು 747 ರೈತ ಸಂಪರ್ಕ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಈ ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಲಿ ವಿತರಣಾ ವ್ಯವಸ್ಥೆಯನ್ನು ಸರಳೀಕರಿಸುವುದು ಹಾಗೂ ತಾಂತ್ರಿಕ ಅಧಿಕಾರಿಗಳ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸುವುದು ಅವಶ್ಯವಾಗಿರುವುದರಿಂದ ಹೊರಗುತ್ತಿಗೆ ಆಧಾರದ ಮೇಲೆ ರೈತ ಸಂಪರ್ಕ ಕೇಂದ್ರಗಳಿಗೆ ಸಿಬ್ಬಂದಿಗಳನ್ನು ಒದಗಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹಿಂಗಾರು/ಬೇಸಿಗೆಯಲ್ಲಿ ರೈತ ಸಂಪರ್ಕ ಕೇಂದ್ರಗಳ ಉತ್ತಮ ನಿರ್ವಹಣೆಗಾಗಿ ಈ ಕೆಳಕಂಡ ವಿಷಯಗಳ ಕುರಿತು ಗಮನದಲ್ಲಿಟ್ಟುಕೊಂಡು ಕ್ರಮವಹಿಸಲು ತಿಳಿಸಿದೆ.

1) ರೈತ ಸಂಪರ್ಕ ಕೇಂದ್ರಗಳಿಗೆ ಅಗತ್ಯವಿರುವ ನುರಿತ ಕಂಪ್ಯೂಟರ್ (Tally) ತಿಳುವಳಿಕೆ ಹೊಂದಿರುವ B.A, B.Com, B.Sc, BBM ಪದವಿ ಹೊಂದಿದ ಸಿಬ್ಬಂದಿಗಳನ್ನು ಆಯ್ಕೆಮಾಡಿಕೊಳ್ಳಲು ಮೆ//ಸ್ಮಾರ್ಟ್ ಡಿಟೆಕ್ಟಿವ್ಸ ಮತ್ತು ಅಲೈಡ್ ಸರ್ವಿಸಸ್ (ಇಂಡಿಯಾ) ಪ್ರೈ.ಲಿ ಇವರಿಗೆ ಸೂಚಿಸಿದೆ ಮತ್ತು ಆಯ್ಕೆಯಾದ ಸಿಬ್ಬಂದಿಗಳ ದಾಖಲಾತಿಗಳನ್ನು ರೈತ ಸಂಪರ್ಕ ಕೇಂದ್ರದ ಸಿಬ್ಬಂದಿಗಳು ಖಾತ್ರಿ ಪಡಿಸಿಕೊಳ್ಳಬಹುದು.
2) ಕರ್ನಾಟಕ ರಾಜ್ಯ ಬೀಜ ನಿಗಮ ಸಂಸ್ಥೆಯವರು ಮೆ//ಸ್ಮಾರ್ಟ್ ಡಿಟೆಕ್ಟಿವ್ಸ ಮತ್ತು ಅಲೈಡ್ ಸರ್ವಿಸಸ್ (ಇಂಡಿಯಾ) ಪ್ರೈ.ಲಿ ಇವರ ಮೂಲಕ ಹೊರಗುತ್ತಿಗೆ ಆಧಾರದ ಮೇರೆಗೆ ರೈತ ಸಂಪರ್ಕ ಕೇಂದ್ರಗಳಿಗೆ ಹಾಜರಾದ ಸಿಬ್ಬಂದಿಗಳನ್ನು ಸೂಕ್ತ ಕಾರಣಗಳಿಲ್ಲದೆ ಕರ್ತವ್ಯದಿಂದ ತೆಗೆದುಹಾಕದೇ ಕಛೇರಿ ಕೆಲಸಕ್ಕೆ ಸೇರಿಸಿಕೊಳ್ಳಲು ಸೂಚಿಸಿದೆ.
3) ಬೀಜ ಸರಬರಾಜು ಹಾಗೂ ಇತರೆ ಕೃಷಿ ಪರಿಕರಗಳ ವಿತರಣಾ ವ್ಯವಸ್ಥೆಯನ್ನು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಯ ಉಸ್ತುವಾರಿಯಲ್ಲಿ ಕೃಷಿ ಪರಿಕರಗಳ ದಾಸ್ತಾನು ನಿರ್ವಹಣೆ, ವಿತರಣಾ ವಹಿವಾಟು, ದಾಖಲಾತಿಗಳ ನಿರ್ವಹಣೆ, ಕೆ-ಕಿಸಾನ್ ಡಾಟಾ ಎಂಟ್ರಿ ಹಾಗೂ ಪರಿಕರ ಸರಬರಾಜು ಸಂಸ್ಥೆಗಳಿಗೆ ರೈತರ ವಂತಿಕೆ ವರ್ಗಾವಣೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಆಯ್ಕೆಯಾದ ಸಿಬ್ಬಂದಿಗಳು ನಿರ್ವಹಿಸುವುದು.
4) ಆ ದಿನದ ಕೃಷಿ ಪರಿಕರಗಳ ವಿತರಣಾ ವಹಿವಾಟಿನಲ್ಲಿ ಸಿಬ್ಬಂದಿಯವರು ಸಂಗ್ರಹಿಸುವ ಮೊತ್ತವನ್ನು ದಿನ ಕೊನೆಯಲ್ಲಿ ಕಛೇರಿಯ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿಗಳಿಗೆ ವಹಿಸಿಕೊಡುವುದು ಹಾಗೂ ಆ ಮೊತ್ತವನ್ನು ಮರುದಿನವೇ ಇಲಾಖಾ ಅಧಿಕಾರಿಗಳು ಬ್ಯಾಂಕಿನಲ್ಲಿ ತಪ್ಪದೇ ಪಾವತಿಸಲು ಸೂಚಿಸಿದೆ.
5) ತಿಂಗಳಿಗೊಮ್ಮೆ ಸಹಾಯಕ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಸಭೆ ಕರೆದು ನಡಾವಳಿಗಳನ್ನು ಮತ್ತು ಪ್ರತಿ ಮಾಹೆಯ ಹೊರಗುತ್ತಿಗೆ ಸಿಬ್ಬಂದಿಯವರ ಹಾಜರಾತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಮೂಲಕ ಕರ್ನಾಟಕ ರಾಜ್ಯ ಬೀಜ ನಿಗಮ ಸಂಸ್ಥೆಯವರಿಗೆ ಕಳುಹಿಸಲು ಕ್ರಮವಹಿಸುವುದು.
6) ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸುತ್ತೋಲೆಯನ್ವಯ ತಮ್ಮ ಜಿಲ್ಲೆಯ ಎಲ್ಲಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಮತ್ತು ರೈತ ಸಂಪರ್ಕ ಕೇಂದ್ರಗಳಿಗೆ ಸರಿಯಾದ ಮಾರ್ಗಸೂಚನೆಗಳನ್ನು ನೀಡುವುದರ ಜೊತೆಗೆ ಆಯ್ಕೆಯಾದ ಸಿಬ್ಬಂದಿಗಳ ಕರ್ತವ್ಯ ಹಾಜರಾತಿಗಳನ್ನು ಕೇಂದ್ರ ಕಛೇರಿಗೆ ಕಳುಹಿಸುವುದು ಮತ್ತು ತ್ವರಿತವಾಗಿ ಕೆಲಸ ಪ್ರಾರಂಭಿಸಲು ಸೂಚಿಸಿದೆ.

(ಸಹಿ)
ಕೃಷಿ ನಿರ್ದೇಶಕರು

- ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಈ ಸುತ್ತೋಲೆ ತಲುಪಿದ ತಕ್ಷಣ ಜಿಲ್ಲೆಯ ಎಲ್ಲಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಮತ್ತು ರೈತ ಸಂಪರ್ಕ ಕೇಂದ್ರಗಳಿಗೆ ಸುತ್ತೋಲೆಯನ್ನು ಕಳುಹಿಸಲು ಸೂಕ್ತ ಕ್ರಮವಹಿಸುವುದು.
- ಪ್ರತಿಯನ್ನು ಮೆ//ಸ್ಮಾರ್ಟ್ ಡಿಟೆಕ್ಟಿವ್ಸ ಮತ್ತು ಅಲೈಡ್ ಸರ್ವಿಸಸ್ (ಇಂಡಿಯಾ) ಪ್ರೈ.ಲಿ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ
  1. ಕೃಷಿ ಆಯುಕ್ತರ ಆಪ್ತ ವಿಭಾಗಕ್ಕೆ
  2. ಕೃಷಿ ನಿರ್ದೇಶಕರ ಆಪ್ತ ವಿಭಾಗಕ್ಕೆ
  3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಹೆಬ್ಬಾಳ,ಬೆಂಗಳೂರು
  4. ಅಪರ ಕೃಷಿ ನಿರ್ದೇಶಕರು(ಮಾನವ ಸಂಪನ್ಮೂಲ ಅಭಿವೃದ್ಧಿ), (ಬೆಳೆ ಅಭಿವೃದ್ಧಿ ಮತ್ತು ಯೋಜನೆ), (ಸಾವಯವ ಕೃಷಿ) ಇವರುಗಳ ಆಪ್ತ ವಿಭಾಗಕ್ಕೆ.
  5. ಜಂಟಿ ಕೃಷಿ ನಿರ್ದೇಶಕರು(ವಿಸ್ತರಣೆ ಮತ್ತು ತರಬೇತಿ), (ಅಭಿವೃದ್ಧಿ), (ಪರಿಕರ).